ವ್ಯಾಪಾರ ಸಂಕೀರ್ಣ ವಾಹನ ತಂಗುದಾಣ ಹಾಗೂ ರುದ್ರ ಭೂಮಿಯ ಅಭಿವೃದ್ಧಿಗಾಗಿ ಮಲ್ಪೆ ಇಚದ್ರಾಳ ಮತ್ತು ಬೀಡಿಗುಡ್ಡೆಯಲ್ಲಿ ಬರುವ ವಿವಿಧ ಕಾಮಗಾರಿಗಳಿಗೆ ಸುಮಾರು ರೂ. 2.00 ಕೋಟಿ ನಿಗದಿಪಡಿಸಲಾಗಿದ್ದು, ಅದರಲ್ಲಿ ಈ ಕಾಮಗಾರಿಗೆ ಸುಮಾರು ರೂ. 1.39 ವೆಚ್ಚವಾಗಿರುತ್ತದೆ.

ಇ) ಎಡಿಬಿ ಯೋಜನೆ ಅಡಿಯಲ್ಲಿ ಉಡುಪಿ ನಗರಸಭಾ ವ್ಯಾಪ್ತಿಯಲ್ಲಿ ಪ್ರಸ್ತುತ ಕೈಗೆತ್ತಿಕೊಳ್ಳಲಾದ ಕಾಮಗಾರಿಗಳು ನಿಗದಿತ ಅವಧಿಯಲ್ಲಿ ಪೂರ್ಣಗೊಂಡಿಲ್ಲ. ಕಾರಣ ಈ ಯೋಜನೆ ಕಾರ್ಯಗತಗೊಳಿಸಲು ಹಲವು ಕಡೆ ಸಾರ್ವಜನಿಕರಿಂದ ಪ್ರತಿರೋಧ ಹಾಗೂ ಸ್ಥಳಗಳ ಲಭ್ಯತೆ ಇಲ್ಲದೆ ಇರುವುದರಿಂದ ನಿಗದಿತ ಸಮಯಕ್ಕೆ ಅನುಷ್ಠಾನ ಗೊಳಿಸಲಾಗಲಿಲ್ಲ. ಆದಾಗ್ಯೂ ಕುಡಿಯುವ ನೀರಿನ ಯೋಜನೆಯು ಬರುವ ಡಿಸೆಂಬರ್ 2005ಕ್ಕೂ, ಒಳಚರಂಡಿ ಯೋಜನೆ ಬರುವ ಮೇ–2006ಕ್ಕೆ ಪೂರ್ಣಗೊಳಿಸಲು ಗೊತ್ತುಪಡಿಸಲಾಗಿದೆ. ಉಳಿದ ಕಾಮಗಾರಿಗಳಾದ ಮಳೆನೀರು ಹರಿಯುವ ಚರಂಡಿ. ಸಾರ್ವಜನಿಕ ಶೌಚಾಲಯ ಹಾಗೂ ಕೊಳಚೆ ಪ್ರದೇಶ ಅಭಿವೃದ್ಧಿ ಕಾಮಗಾರಿಗಳು ಮುಗಿದಿರುತ್ತದೆ.

ಈ) ಈ ಯೋಜನೆ ಮೇ ದಲಾಲ್ ಕನ್‌ಸಲ್ಟೆಂಟ್ ರವರು ಸಲಹೆಗಾರರಾಗಿ ನೇಮಿಸಲಾಗಿದೆ. ಇವರಿಗೆ ರೂ. 22.50 ಕೋಟಿ ನಿಗದಿಪಡಿಸಲಾಗಿದ್ದು ಇದುವರೆಗೆ ರೂ. 17.00 ಕೋಟಿ ವೆಚ್ಚವಾಗಿರುತ್ತದೆ.

ಮೇ ದಲಾಲ್ ಕನ್‌ಸಲ್ಟೆಂಟ್‌ರವರು ಈ ಯೋಜನೆಗೆ ಅನುಷ್ಠಾನಗೊಳಿಸಲು ಬೇಕಾಗುವ ವಿನ್ಯಾಸ ಹಾಗೂ ಕಾಮಗಾರಿಗಳ ನಕ್ಷೆಯನ್ನು ತಯಾರು ಪಡಿಸಿ ಇದರಂತೆ ಕಾಮಗಾರಿಗಳ ಉಸ್ತುವಾರಿ ನಡೆಸುವ ಜವಬ್ದಾರಿ ಇವರದಾಗಿರುತ್ತದೆ.

ಉ) ಕುಡಿಯುವ ನೀರಿನ ಹಾಗೂ ಒಳಚರಂಡಿ ಯೋಜನೆಗಳ ಅನುಷ್ಠಾನಕ್ಕಾಗಿ ಹಲವು ಕಡೆ ರಸ್ತೆಗಳನ್ನು ಅಗೆದು ಈ ರೀತಿ ಅಗದ ರಸ್ತೆಗಳನ್ನು ಯಥಾಸ್ಥಿತಿಗೆ ತರುವ ಕಾಮಗಾರಿಗಳು ಆಯಾಯ ಪ್ಯಾಕೇಜ್ ಅಡಿಯಲ್ಲಿ ನಿಗದಿತ ಹಣವನ್ನು ಸಮೂದಿಸಲಾಗಿದೆ. ಇದರಂತೆ ಅಗೆದ ರಸ್ತೆಗಳ ಯಥಾಸ್ಥಿತಿಗೆ ತರುವ ಕಾಮಗಾರಿ ಕೈಗೆತ್ತಿಕೊಳ್ಳಲಾಗುವುದು.

ಊ) ರಸ್ತೆ ಅಗೆದು ಮರು ಡಾಂಬರೀಕರಣ ಮಾಡದೆ ಸಾರ್ವಜನಿಕರಿಗೆ ತೊಂದರೆ ಯಾಗುತ್ತಿರುವ ವಿಷಯವು ಸರ್ಕಾರದ ಗಮನಕ್ಕೆ ಬಂದಿದ್ದು, ಕೂಡಲೆ ಸಾರ್ವಜನಿಕರಿಗೆ ತೊಂದರೆಯಾಗದ ರೀತಿಯಲ್ಲಿ ರಸ್ತೆಗಳನ್ನು ಯಥಾಸ್ಥಿತಿಗೆ ತರಲು ಕ್ರಮ ಕೈಗೊಳ್ಳಲಾಗುತ್ತಿದೆ.

5415(6265) ಶ್ರೀ ರಘುಪತಿ ಭಟ್.ಕೆ (ಉಡುಪಿ) : ಮಾನ್ಯ ಪೌರಾಡಳಿತ ಹಾಗೂ ಕೆಯುಐಡಿಎಫ್‌ಸಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿರುವ ನಗರಸಭೆಗಳಿಗೆ ಕಾಮಗಾರಿಗಳನ್ನು ಕೈಗೊಳ್ಳಲು ಟೆಂಡರ್ ಕರೆಯದೆ ಗುತ್ತಿಗೆದಾರರಿಗೆ ವಹಿಸಿಕೊಡಲು ಇರುವ ಅಧಿಕಾರವೆಷ್ಟು;

ಆ) ತುರ್ತು ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ನಗರಸಭಾಧ್ಯಕ್ಷರಿಗೆ ಕನಿಷ್ಟ 1.00 ಲಕ್ಷ ರೂಪಾಯಿಯ ಕಾಮಗಾರಿಗಳನ್ನು S.R.Rate ಗುತ್ತಿಗೆದಾರರಿಂದ ಮಾಡಿಸಲು ಅಧಿಕಾರ ಕೊಡಬೇಕೆಂದು ಸರ್ಕಾರ ಭಾವಿಸಿದೆಯೇ;

ಇ) ಈ ಹೊಸ ಸರ್ಕಾರಿ ಆದೇಶ ಮಾಡಲು ಸರ್ಕಾರ ಇಚ್ಛಿಸಿದೆಯೇ;

ಈ) ರಾಜ್ಯದಲ್ಲಿ ಹಿಂದೆ ನಗರಸಭಾಗಳಿಗೆ ಅನುದಾನ ಬಿಡುಗಡೆ ಮಾಡುವಾಗ ಇದ್ದ ಮಾನದಂಡವೇನು; ಈ ಯಾವ ಮಾನದಂಡದ ಮೇಲೆ ಅನುದಾನ ಬಿಡುಗಡೆ ಮಾಡಲು ಸರ್ಕಾರ ಯೋಚಿಸಿದೆ?

ಶ್ರೀ ಎಸ್.ಆರ್. ಮೋರೆ. (ಪೌರಾಡಳಿತ ಹಾಗೂ ಕೆಯುಐಡಿಎಫ್‌ಸಿ ಸಚಿವರು) :

ಅ) ರೂ. 1.00 ಲಕ್ಷದವರೆಗೆ ತುರ್ತು ಕಾಮಗಾರಿ ಕೈಗೊಳ್ಳಲು ಮಾತ್ರ.

ಆ) ಹೌದು.

ಇ) ಸರ್ಕಾರಿ ಆದೇಶ ದಿನಾಂಕ : 7–7–2004 ರಂದು ಹೊರಡಿಸಿದೆ.

ಈ) ಜನಸಂಖ್ಯೆ/ರಸ್ತೆಗಳ ಉದ್ದ/ಬೀದಿ ದೀಪಗಳ ಆದಾಯ/ಆಸ್ಪತ್ರೆಗಳ ಅನುಕೂಲತೆ ಇತ್ಯಾದಿಗಳ ಆಧಾರದ ಮೇಲೆ ಅನುದಾನ ಬಿಡುಗಡೆ ಮಾಡಲಾಗುತ್ತಿದೆ.

5416(6266) ಶ್ರೀ ರಘುಪತಿ ಭಟ್ ಕೆ. (ಉಡುಪಿ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಉಡುಪಿ ಜಿಲ್ಲೆ ರಚನೆಯಾದ ಬಳಿಕ ಉಡುಪಿ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಎಷ್ಟು ಕ್ರಿಮಿನಲ್–ಕೊಲೆಗಳು ನಡೆದಿವೆ;

ಆ) ಕೊಲೆ ನಡೆದ ಸ್ಥಳ ಮತ್ತು ವ್ಯಕ್ತಿಯ ವಿವರ ನೀಡುವುದು;

ಇ) ನಡೆದ ದರೋಡೆ ಪ್ರಕರಣಗಳೆಷ್ಟು;

ಈ) ಈ ಅಪರಾದ ಪ್ರಕರಣಗಳ ವಿಚಾರಣೆ ಯಾವ ಹಂತದಲ್ಲಿದೆ;

ಉ) ಅಪರಾಧಿಗಳಿಗೆ ವಿಧಿಸಿರುವ ಶಿಕ್ಷೆ ಏನು;

ಊ) ಶೋಷಿತರಿಗೆ ನೀಡಿರುವ ಪರಿಹಾರವೇನು?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) :

ಅ) ಉಡುಪಿ ಜಿಲ್ಲೆ ರಚನೆಯಾದ ಬಳಿಕ ಉಡುಪಿ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಒಟ್ಟು 32 ಕೊಲೆ ಪ್ರಕರಣಗಳು ವರದಿಯಾಗಿರುತ್ತವೆ.

ಆ) ವಿವರಗಳನ್ನು ಅನುಬಂಧ–ಅ ನಲ್ಲಿ ನೀಡಲಾಗಿದೆ.

ಇ) ಉಡುಪಿ ಜಿಲ್ಲೆ ರಚನೆಯಾದ ಬಳಿಕ ಉಡುಪಿ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಒಟ್ಟು 7 ದರೋಡೆ ಪ್ರಕರಣಗಳು ವರದಿಯಾಗಿರುತ್ತವೆ.

ಈ) ವಿವರವನ್ನು ಅನುಬಂಧ–ಆ ನಲ್ಲಿ ನೀಡಲಾಗಿದೆ.

ಉ) ಈ ಮೇಲಿನ ಎಲ್ಲಾ ದರೋಡೆ ಪ್ರಕರಣಗಳು ತನಿಖಾ ಹಂತ ಅಥವಾ ನ್ಯಾಯಾಲಯದ ವಿಚಾರಣೆಯಲ್ಲಿರುತ್ತವೆ.

ಊ) ಈ ಮೇಲಿನ ಯಾವುದೇ ಪ್ರಕರಣದಲ್ಲಿ ಶೋಷಿತರಿಗೆ ಇಲಾಖೆಯಿಂದ ಯಾವುದೇ ಪರಿಹಾರ ನೀಡಿರುವುದಿಲ್ಲ.

ಅನುಬಂಧ–ಅ

ಕ್ರ.ಸಂ.	ಪೊಲೀಸ್ ಠಾಣೆ, ಮೊಕದ್ದಮೆ ಸಂಖ್ಯೆ ಕಲಂ	ಅಪರಾಧ ನಡೆದ ಸ್ಥಳ	ಕೊಲೆಯಾದವರ ವಿವರ	ಆರೋಪಿಗಳ ವಿವರ	ಪ್ರಕರಣದ ಪ್ರಸ್ತುತ ಹಂತ
1	ಉಡುಪಿ ನಗರ ಠಾಣೆ ಮೊ.ನಂ: 152/98 ಕಲಂ: 302 ಐ.ಪಿ.ಸಿ	ಶಿವಳ್ಳಿ ಗ್ರಾಮದ ಬುಡ್ಡಾರ್ ಎಂಬಲ್ಲಿ ಮೃತನ ಮನೆಯಲ್ಲಿ	ಕಾಮಿಯಾರ್ ಯಾವರಿ ಎಂಬ ಇರಾನಿಯನ್ ವ್ಯಕ್ತಿ	ಉಮೇದ್ ಹುಸ್ಸೇನ್	ಖುಲಾಸೆಗೊಂಡಿರುತ್ತದೆ.